**ಓ.ಎಸ್. ನಂ. 403/2018**
**ಪಿ.ಡಬ್ಲ್ಯೂ-1**

**(ಇಂದು ದಿನಾಂಕಃ 21-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**
**ಪಾಟೀ ಸವಾಲು :ಪ್ರತಿವಾದಿ ಪರ ವಕೀಲರಿಂದಃ**

ನಾನು 7 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಹೆಚ್ಚಾಗಿ ಬರುವುದಿಲ್ಲ ನನ್ನ ವಿದ್ಯಾಭ್ಯಾಸ ಉರ್ದು ಶಾಲೆಯಲ್ಲಿ ಆಗಿರುತ್ತದೆ. ಈ ದಾವೆಯನ್ನು ದಾಖಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಈ ದಾವೆಯಲ್ಲಿ ಬರೆಸಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಈ ದಾವೆಯಲ್ಲಿ ಪ್ರತಿವಾದಿಯವರು ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಅವರು ಸಲ್ಲಿಸಿರುವ ತಕರಾರಿನ ಬಗ್ಗೆ ನಾನು ನನ್ನ ವಕೀಲರಿಂದ ತಿಳಿದುಕೊಂಡಿರುವುದಿಲ್ಲ. ಆ ಬಗ್ಗೆ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ನನ್ನ ಮದುವೆ 2012 ಸಾಲಿನಲ್ಲಿ ಆಗಿರುತ್ತದೆ. ನಮ್ಮ ಮದುವೆ ಶಿಂಧಿಕುರಬೇಟ ಗ್ರಾಮದಲ್ಲಿ ಆಗಿರುತ್ತದೆ. ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ಹಾಗೂ ನನ್ನ ಅಕ್ಕ ವಾಸವಾಗಿರುತ್ತೇವೆ ನಮ್ಮ ತಂದೆ ಮೃತಪಟ್ಟಿರುತ್ತಾರೆ. ನಾವೆಲ್ಲರೂ ಕೂಡಿಕೊಂಡು ಶಿಂಧಿಕುರಬೇಟ ಗ್ರಾಮದಲ್ಲಿ ವಾಸವಾಗಿರುತ್ತೇವೆ. ಈಗ ಸಧ್ಯ ನಾನು ಹೊಲದಲ್ಲಿ ಕೂಲಿ ಕೆಲಸ ಮಾಡುತ್ತೇನೆ.

ನನ್ನ ಹಾಗೂ ಪ್ರತಿವಾದಿಯವರ ಮದುವೆ ಆದ ನಂತರ ನಾವಿಬ್ಬರೂ ಕೂಡಿಕೊಂಡು ಕೇವಲ 2 ವರ್ಷಗಳವರೆಗೆ ಬಾಳ್ವೆ ಮಾಡಿರುತ್ತೇವೆ. ನನಗೆ ಅವರಿಗೆ ಯಾವುದೇ ಜಗಳ ಆಗಿರುವುದಿಲ್ಲ. ನನ್ನ ಮೊದಲನೇ ಮಗ 2013 ಸಾಲಿನಲ್ಲಿ ಜನಿಸಿರುತ್ತಾನೆ ಅದೇ ರೀತಿ ನನ್ನ 2 ನೇ ಮಗ 2015 ಸಾಲಿನಲ್ಲಿ ಜನಿಸಿರುತ್ತಾನೆ. ನಾನು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಪ್ರತಿವಾದಿಯವರು ನನ್ನನ್ನು ಬಿಟ್ಟು ಹೋಗಿ 3 ವರ್ಷಗಳು ಆಗಿದ್ದವು. ನನ್ನ ಇಬ್ಬರು ಮಕ್ಕಳಲ್ಲಿ 1 ನೇ ಮಗ ದಿಃ 15-07-2013 ಹಾಗೂ 2 ನೇ ಮಗ ದಿಃ 31-12-2015 ರಂದು ಜನಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಯವರು 2 ನೇ ಮಗು ಹೇರಿಗೆ ವರೆಗೆ ನನ್ನ ಜೊತೆ ವಾಸವಾಗಿದ್ದರು ಎಂದರೆ ಸರಿ. ನನ್ನ ಪ್ರಕಾರ ಪ್ರತಿವಾದಿಯವರು ಹೇರಿಗೆಗೆ ಹೋದವರು ಮರಳಿ ಬಂದಿರುವುದಿಲ್ಲ. ನಿಮಗೆ ಅವರಿಗೆ ಜಗಳ ಆಗುತ್ತಿತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೆಚ್ಚಾಗಿ

ಆಗುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಯವರು ನನ್ನನ್ನು ಬಿಟ್ಟು ಹೋದ ದಿನಾಂಕ ನಿಖರವಾಗಿ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಅವರು 2014 ಸಾಲಿನಲ್ಲಿ ನನ್ನನ್ನು ಬಿಟ್ಟು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ಮದುವೆ ಆದ ನಂತರ ನಾನು ಮತ್ತು ನನ್ನ ಕುಟುಂಬದ ಸದಸ್ಯರು ಕೂಡಿಕೊಂಡು ಪ್ರತಿವಾದಿಯವರಿಗೆ 3 ಲಕ್ಷ ನಗದು ಹಣ ಹಾಗೂ 5 ತೊಲೆ ಬಂಗಾರವನ್ನು ತವರು ಮನೆಯಿಂದ ತರಬೇಕು ಎಂದು ಕಿರುಕುಳ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಅವರು ನನ್ನ ಬೇಡಿಕೆ ಪ್ರಕಾರ ವರದಕ್ಷಿಣೆಯನ್ನು ತರದೇ ಇದ್ದರೆ ವಿವಾಹ ವಿಚ್ಛೆದನೆಯನ್ನು ಕೊಡಬೇಕು ಎಂದು ಒತ್ತಾಯಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಪ್ರತಿವಾದಿಗೆ ಸದರಿ ಅವರು ನನ್ನ ಬೇಡಿಕೆಯನ್ನು ಕೊಡದೇ ಇದ್ದರೆ 2 ನೇ ಮದುವೆ ಮಾಡಿಕೊಳ್ಳುತ್ತೆನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನಾನು ಪ್ರತಿವಾದಿಯವರಿಗೆ ಯಾವುದೇ ನೋಟಿಸನ್ನು ಕೊಟ್ಟಿರುವುದಿಲ್ಲ. ಸದರಿ ನೋಟಿಸನ್ನು ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಪ್ರತಿವಾದಿ ನನಗೆ ಯಾವುದೇ ರೀತಿಯ ತೊಂದರೆ ಮಾಡದೇ ಇದ್ದರೂ ಕೂಡಾ ನಾನು ಅವರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರ ಮನೆಗೆ ಸುಮಾರು 25 ಬಾರಿ ಅವರನ್ನು ಜೀವನ ಮಾಡಲು ಕರೆಯಲು ಹೋಗಿರುತ್ತೇನೆ ಆದರೆ ನಾನು ಹೋಗಿದ ದಿನಾಂಕಗಳನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು 18 ಬಾರಿ ಹಿರಿಯನ್ನು ನನ್ನೊಂದಿಗೆ ಪ್ರತಿವಾದಿಯವರನ್ನು ಕರೆಯಲು ಹೋಗಿರುತ್ತೇನೆ ಉಳಿದ ಸಮಯದಲ್ಲಿ ನಾನು ಒಬ್ಬನೇ ಅವರನ್ನು ಕರೆಯಲು ಹೋಗಿರುತ್ತೇನೆ. ನನ್ನ ಜೊತೆಗೆ ಯಾವ ಹಿರಿಯರು ಬಂದಿದ್ದರು ಎಂದು ಹೇಳಲು ಆಗುತ್ತದೆ. ನಾನು ಪ್ರತಿವಾದಿಯವರನ್ನು ಕರೆಯಲು ನಿಖರವಾಗಿ ಯಾವ ದಿನಾಂಕ, ತಿಂಗಳು ಹಾಗೂ ಇಸವಿಯಲ್ಲಿ ಹೋಗಿರುತ್ತೇನೆ ಎಂದು ಹೇಳಲು ಆಗುವುದಿಲ್ಲ ಸಾಕ್ಷಿಯು ಮುಂದುವರೆದು ನಾನು ಸದರಿ ಅವರನ್ನು 2018 ಸಾಲಿನವರೆಗೆ ಕರೆಯಲು ಹೋಗಿರುತ್ತೇನೆ ಎಂದು ನುಡಿದಿರುತ್ತಾರೆ. ನನಗೆ ಹಾಗೂ ಪ್ರತಿವಾದಿಯವರಿಗೆ ಯಾವ ಜಗಳ ಆಗದೇ ಇದ್ದರೂ ಕೂಡಾ ನಾನು ಸದರಿ ಅವರನ್ನು ಬಂಗಾರ ಹಾಗೂ ಹಣವನ್ನು ತರಲು ಹೇಳಿದ್ದು ಸದರಿ ಅವರನ್ನು ನಾನು ಮನೆಯಿಂದ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ನಮ್ಮ ಮನೆಯಲ್ಲಿ ಇದ್ದಾಗ ನಾವು ಸದರಿ ಅವರಿಗೆ ಊಟ ಹಾಗೂ ಬಟ್ಟೆಯನ್ನು ಸರಿಯಾಗಿ ಕೊಡುತ್ತಿದ್ದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು

**<u>ಓ.ಎಸ್. ನಂ. 403/2018</u>**
**<u>ಪಿ.ಡಬ್ಲ್ಯೂ-1</u>**

ಪ್ರತಿವಾದಿಯವರನ್ನು ಚೆನ್ನಾಗಿ ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಕಾರಣಗಳು ಕಂಡು ಬಂದ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

(Smt. Surya Prabha H.D)
Addl. CJ & JMFC, Gokak